KAKL400024592024

**1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಮುಳಬಾಗಿಲು**

ದಿನಾಂಕಃ 9 ನೇ ಜುಲೈ - 2026

- ಉಪಸ್ಥಿತರು -

**ಶ್ರೀಮತಿ ರೋಹಿಣಿ.ಡಿ. ಬಿ.ಎ., ಎಲ್.ಎಲ್.ಬಿ.**

**1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು , ಮುಳಬಾಗಿಲು .**

**ಸಿ.ಸಿ.ಸಂಖ್ಯೆ:1922/2024**

ಪಿರ್ಯಾದುದಾರರು:– ಸರ್ಕಾರದ ಪರವಾಗಿ ನಂಗಲಿ ಠಾಣಾ ಪೋಲೀಸರು,

(ಪ್ರತಿನಿಧಿಸಿದವರು –ಸಹಾಯಕ ಸರ್ಕಾರಿ ಅಭಿಯೋಜಕರು)

- ವಿರುದ್ಧ -

ಆರೋಪಿ:– **ಯಾರಬ್,**
ಬಿನ್ ಖಾದರ್ ವಲ್ಲಿ, 24 ವರ್ಷ,
ವಾಸಃ ಮರ್ಲಪಲ್ಲಿ ಗ್ರಾಮ,
ಗಂಗಾವರಂ, ಮಂಡಲಂ,
ಚಿತ್ತೂರು ಜಿಲ್ಲೆ, ಆಂಧ್ರ ಪ್ರದೇಶ.

**(ಪ್ರತಿನಿಧಿಸಿದವರು – ಶ್ರೀ.ಎಸ್.ಬಿ.ಎ .ವಕೀಲರು)**

**ದಿನಾಂಕಗಳು ಃ-**

| | |
|---|---|
| ಘಟನೆ ಸಂಭವಿಸಿದದಿನಾಂಕ | 02-11-2023 |
| ಅಂತಿಮ ವರದಿ ಸಲ್ಲಿಸಿದ ದಿನಾಂಕ | 04-04-2024 |
| ವಿಚಾರಣೆ ಪ್ರಾರಂಭವಾದ ದಿನಾಂಕಃ | 28-10-2024 |
| ವಿಚಾರಣೆ ಕೊನೆಯಗೊಂಡ ದಿನಾಂಕಃ | 01-09-2025 |
| ಅಪರಾಧದ ಸ್ವರೂಪ | ಃ **ಭಾರತೀಯ ದಂಡ ಸಂಹಿತೆ ಕಲಂ. 279, 304(ಎ) ಕಾಯ್ದೆ ರೀತ್ಯಾ** |
| **ನ್ಯಾಯಾಧೀಶರ ಅಭಿಪ್ರಾಯ** | ಃ ಅಂತಿಮ ಆದೇಶದಂತೆ |

- ಃ ತೀರ್ಪು ಃ -

ನಂಗಲಿ ಠಾಣಾ ಆರಕ್ಷಕ ಉಪ ನಿರೀಕ್ಷಕರು ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 279, 304(ಎ) ಕಾಯ್ದೆ ರಡಿಯಲ್ಲಿ ಅಪರಾಧವೆಸಗಿರುವುದಾಗಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

2. **ಅಭಿಯೋಜನಾ ಪ್ರಕರಣದ ಸಂಕ್ಷಿಪ್ತ ಸಾರಾಂಶ ಏನೆಂದರೆಃ**

ಮುಳಬಾಗಿಲು ತಾಲ್ಲೂಕು ನಂಗಲಿ ಪೊಲೀಸ್ ಠಾಣಾ ಸರಹದ್ದೀನ ಕಿರುಮಣಿ ಗೇಟ್ ಬಳಿ ಚಾಸಾ-1 ರವರ ಜಿರಾಯ್ತಿ ಜಮೀನು ಮಾಡಿಕೊಂಡಿದ್ದು, ದಿನಾಂಕಃ 02.11.2023 ರಂದು ಬೆಳಿಗ್ಗೆ 6.30 ಗಂಟೆ ಸಮಯದಲ್ಲಿ ಮೃತ ವೆಂಕಟೇಶಪ್ಪ ರವರು ತೋಟದ ಬಳಿ ಹೋಗಲೆಂದು ತನ್ನ ಬಾಬತ್ತು ಕೆ. ಎ.05 ಕ್ಯೂ.1955 ಸ್ಲೆಂಡರ್ ದ್ವಿ ಚಕ್ರ ವಾಹನದಲ್ಲಿ ಮುಳಬಾಗಿಲು - ಪುಂಗನೂರು ರಸ್ತೆಯ ಶ್ರೀವರ್ಷ ಡಾಬಾ ಬಳಿಯ ರಸ್ತೆಯಲ್ಲಿ ಹೋಗುತ್ತಿದ್ದಾಗ ಆರೋಪಿಯು ಎ.ಪಿ.39.ಯು.ಕೆ..9679 ಅಶೋಕ್

ಲೈಲ್ಯಾಂಡ್ ವಾಹನವನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಜಾಲನೆ ಮಾಡಿಕೊಂಡು ಮೃತ ವೆಂಕಟೇಶಪ್ಪ ರವರು ಹೋಗುತ್ತಿದ್ದ ದ್ವಿ ಚಕ್ರ ವಾಹನಕ್ಕೆ ಹಿಂದಿನಿಂದ ಡಿಕ್ಕಿ ಹೊಡೆದ ಪರಿಣಾಮ ಮೃತ ವೆಂಕಟೇಶಪ್ಪ ರವರು ದ್ವಿ ಚಕ್ರ ವಾಹನ ಸಮೇತ ಕೆಳಗೆ ಬಿದ್ದು ಹೋಗಿ ತಲೆಗೆ ತೀವ್ರ ಸ್ವರೂಪದ ಗಾಯವಾಗಿದ್ದು , ಕೈ ಕಾಲಿಗೆ ರಕ್ತ ಗಾಯವಾಗಿ ಚಿಕಿತ್ಸೆಗಾಗಿ ಕೋಲಾರ ಆರ್ .ಎಲ್ ಜಾಲಪ್ಪ ಆಸ್ಪತ್ರೆಗೆ ದಾಖಲಾಗಿದ್ದು, ದಿನಾಂಕಃ 13.12.2023 ರಂದು ಸಂಜೆ ಸುಮಾರು 6.00 ಗಂಟೆ ಸಮಯದಲ್ಲಿ ಆರ್.ಎಲ್. ಜಾಲಪ್ಪ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿರುತ್ತಾರೆ ಎಂದು ಆಪಾದಿಸಿ ಈ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

**3.** ನಂಗಲಿ ಪೋಲಿಸರು ಫಿರ್ಯಾದುದಾರರಾದ ಪವಿತ್ರ ರವರು ನೀಡಿದ ಪ್ರಥಮ ವರ್ತಮಾನ ಹೇಳಿಕೆಯ ಅಧಾರದ ಮೇಲೆ ಠಾಣಾ ಮೊಕದ್ದಮೆ ಸಂಖ್ಯೆಃ 218/2023 ರಂತೆ ಪ್ರಕರಣ ದಾಖಲಿಸಿ ತನಿಖೆಯನ್ನು ಕೈಗೊಂಡು ತನಿಖೆಯನ್ನು ಪೂರ್ಣಗೊಳಿಸಿದ ನಂತರ ಆರೋಪಿ ವಿರುದ್ಧ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತಾರೆ. ದೋಷಾರೋಪಣ ಪಟ್ಟಿಯನ್ನು ಸ್ವೀಕರಿಸಿದ ನಂತರ ಈ ನ್ಯಾಯಾಲಯವು ಭಾರತೀಯ ದಂಡ ಸಂಹಿತೆ ಕಲಂ.279, 304(ಎ) ಕಾಯ್ದೆ ರಡಿ ಸಂಜ್ಞೆಯತೆಯನ್ನು ತೆಗೆದುಕೊಂಡಿರುತ್ತದೆ.

**4.** ಆರೋಪಿತನು ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಪಡೆದುಕೊಂಡಿರುತ್ತಾರೆ. ನಂತರ ಆರೋಪಿತನಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರಡಿಯಲ್ಲಿ

ದೋಷಾರೋಪಣಾಪಟ್ಟಿಯ ನಕಲನ್ನು ನೀಡಲಾಯಿತು. ದೋಷಾರೋಪಣಾ ಪೂರ್ವದಲ್ಲಿ ವಿಚಾರಣೆ ಮಾಡಿ ನಂತರ ಆಪಾದನೆಯ ಸಾರಾಂಶವನ್ನು ರಚಿಸಿ ಆರೋಪಿತನಿಗೆ ಓದಿ ವಿವರಿಸಲಾಗಿ, ಆರೋಪಿತನು ತಾನು ತಪ್ಪು ಮಾಡಿಲ್ಲ ವಿಚಾರಣೆಯಾಗಬೇಕೆಂದು ಉತ್ತರಿಸಿದ ಪ್ರಯುಕ್ತ ಪ್ರಕರಣವನ್ನು ಸಾಕ್ಷಿದಾರರ ವಿಚಾರಣೆಗೆ ಹಾಕಿಕೊಳ್ಳಲಾಗಿರುತ್ತದೆ.

**5.** ತಮ್ಮ ಪ್ರಕರಣವನ್ನು ಬೆಂಬಲಿಸಿ ಅಭಿಯೋಜನೆಯವರು ಅ.ಸಾ. 1 ರಿಂದ ಅ.ಸಾ.9 ರವರನ್ನು ವಿಚಾರಣೆಗೊಳಪಡಿಸಿ ನಿ.ಪಿ.1 ರಿಂದ 13 ರ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ.

**6.** ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಅಭಿಯೋಜನಾ ಸಾಕ್ಷಿದಾರರ ಸಾಕ್ಷ್ಯದಲ್ಲಿ ಆರೋಪಿತನ ವಿರುದ್ಧ ನಡೆಯುವ ಸಾಕ್ಷವನ್ನು ಓದಿ ವಿವರಿಸಿ ಅಭಿಯೋಜನೆಯವರ ಸಾಕ್ಷ್ಯದ ಬಗ್ಗೆ ಪ್ರಶ್ನಿಸಿ ಹೇಳಿಕೆಯನ್ನು ದಾಖಲಿಕೊಂಡಿದೆ. ಆರೋಪಿತನು ಅಭಿಯೋಜನಾ ಸಾಕ್ಷ್ಯವನ್ನು ಅಲ್ಲಗಳೆದಿದ್ದು ತಮ್ಮ ಪರವಾಗಿ ಯಾವುದೇ ರಕ್ಷಣಾತ್ಮಕ ಸಾಕ್ಷ್ಯಗಳ ವಿಚಾರಣೆ ಮಾಡಲು ಬಯಸಿರುವುದಿಲ್ಲ.

**7**. ವಾದವನ್ನು ಆಲಿಸಿ ಕಡತವನ್ನು ಪರಿಶೀಲಿಸಿ ನೋಡಲಾಗಿ ಈ ಕೆಳಕಂಡ ಅಂಶಗಳು ನ್ಯಾಯಲಯದ ನಿರ್ಣಯಕ್ಕೆ ಬಂದಿರುತ್ತವೆ.

## ಅಂಶಗಳು

1. ದಿನಾಂಕಃ 02.11.2023 ರಂದು ಬೆಳಿಗ್ಗೆ 6.30 ಗಂಟೆ ಸಮಯದಲ್ಲಿ ಮೃತ ವೆಂಕಟೇಶಪ್ಪ ರವರು ತೋಟದ ಬಳಿ ಹೋಗಲೆಂದು ತನ್ನ ಬಾಬತ್ತು ಕೆ. ಎ.05 ಕ್ಯೂ.1955 ಸ್ಲೆಂಡರ್ ದ್ವಿ ಚಕ್ರ ವಾಹನದಲ್ಲಿ ಮುಳಬಾಗಿಲು – ಪುಂಗನೂರು ರಸ್ತೆಯ ಶ್ರೀವರ್ಷಾ ಡಾಬಾ ಬಳಿಯ ರಸ್ತೆಯಲ್ಲಿ ಹೋಗುತ್ತಿದ್ದಾಗ ಆರೋಪಿಯು ಎ.ಪಿ.39.ಯು.ಕೆ..9679 ಅಶೋಕ್ ಲೈಲ್ಯಾಂಡ್ ವಾಹನವನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಮೃತ ವೆಂಕಟೇಶಪ್ಪ ರವರು ಹೋಗುತ್ತಿದ್ದ ದ್ವಿ ಚಕ್ರ ವಾಹನಕ್ಕೆ ಹಿಂದಿನಿಂದ ಡಿಕ್ಕಿ ಹೊಡೆದು ಅಪಘಾವನ್ನುಂಟು ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 279 ರ ದಂಡನೀಯವಾದ ಅಪರಾಧವನ್ನು ಎಸಗಿರುವುದಾಗಿ ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸಿದೆಯೇ?

2. ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿ ವಾಹನವನ್ನು ಅತೀವೇಗ ಹಾಗೂ ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದು ಅಪಘಾತ ಪಡಿಸಿದ ಪರಿಣಾಮ ಮೃತ ವೆಂಕಟೇಶಪ್ಪ ರವರು ದ್ವಿ ಚಕ್ರ ವಾಹನ ಸಮೇತ ಕೆಳಗೆ ಬಿದ್ದು ಹೋಗಿ ತಲೆಗೆ ತೀವ್ರ ಸ್ವರೂಪದ ಗಾಯವಾಗಿದ್ದು, ಕೈ ಕಾಲಿಗೆ ರಕ್ತ ಗಾಯವಾಗಿ ಚಿಕಿತ್ಸೆಗಾಗಿ ಕೋಲಾರ ಆರ್ .ಎಲ್ ಜಾಲಪ್ಪ ಆಸ್ಪತ್ರೆಗೆ ದಾಖಲಾಗಿದ್ದು, ದಿನಾಂಕಃ 13.12.2023 ರಂದು ಸಂಜೆ ಸುಮಾರು 6.00 ಗಂಟೆ ಸಮಯದಲ್ಲಿ ಆರ್.ಎಲ್. ಜಾಲಪ್ಪ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿರುತ್ತಾರೆ, ಆ ಮೂಲಕ ಆರೋಪಿ ಭಾರತೀಯ ದಂಡ ಸಂಹಿತೆ ಕಲಂ 304(ಎ) ರ ದಂಡನೀಯವಾದ ಅಪರಾಧವನ್ನು ಎಸಗಿರುವುದಾಗಿ

**ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸಿದೆಯೇ?**

**3. ಹಾಗಿದ್ದರೆ ಯಾವ ಆದೇಶ?**

8. ಮೇಲಿನ ಅಂಶಗಳಿಗೆ ನ್ಯಾಯಾಲಯದ ಉತ್ತರವು ಮುಂದಿನ ಕಾರಣಗಳಿಗಾಗಿ ಈ ಕೆಳಕಂಡತಿವೆ.

**ಅಂಶ 1 ಮತ್ತು 2 : ನಕಾರಾತ್ಮಕವಾಗಿ**

**ಅಂಶ 3 : ಅಂತಿಮ ಆದೇಶದಂತೆ.**

//**ಕಾರಣಗಳು**//

9. .**ಅಂಶ 1 ಮತ್ತು 2:** ಪ್ರಕರಣದ ವಾಸ್ತವಾಂಶಗಳ ನಿರೂಪಣೆಯ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಅಂಶ 1 ಮತ್ತು 2 ನ್ನು ಜೊತೆಯಾಗಿ ಚರ್ಚಿಸಲು ತೆಗೆದುಕೊಳ್ಳಲಾಗಿದೆ. ದೋಷಾರೋಪಣಪಟ್ಟಿಯಲ್ಲಿನ ಒಟ್ಟು 19 ಜನ ಸಾಕ್ಷಿದಾರರ ಪೈಕಿ ಚಾಸಾ –7 ರಿಂದ 15 ಮತ್ತು 18 ರವರನ್ನು ಮಾನ್ಯ ಸ.ಸ.ಅ ರವರ ಕೋರಿಕೆ ಮೇರೆಗೆ ಪ್ರಕರಣದಿಂದ ಕೈ ಬಿಡಲಾಗಿರುತ್ತದೆ. ಉಳಿದ ಸಾಕ್ಷಿದಾರರನ್ನು ಅ.ಸಾ.1 ರಿಂದ 9 ರವರನ್ನಾಗಿ ವಿಚಾರಣೆಗೆ ಒಳಪಡಿಸಲಾಗಿರುತ್ತದೆ. ಸದರಿ ಸಾಕ್ಷಿದಾರರ ಮೂಲಕ ನಿಪಿ 1 ರಿಂದ 13 ದಾಖಲೆಗಳನ್ನು ಗುರುತಿಸಲಾಗಿರುತ್ತದೆ.

10. ಸಾಕ್ಷಿದಾರರ ಪೈಕಿ ಅ.ಸಾ. 1 ಪಿರ್ಯಾದುದಾರರಾಗಿದ್ದು, ಅ.ಸಾ–2 ರಿಂದ 4 ಪ್ರತ್ಯಕ್ಷ ಸಾಕ್ಷಿದಾರರು, ಅ.ಸಾ –5 ಮತ್ತು 6 ಸ್ಥಳ ಮಹಜರ್ ಸಾಕ್ಷಿದಾರರು, ಅ.ಸಾ .7 ಮತ್ತು 8 ತನಿಖಾಧಿಕಾರಿಗಳು, ಅ.ಸಾ–9 ವಾಹನ ತಪಾಸಣಾಧಿಕಾರಿಗಳಾಗಿರುತ್ತಾರೆ.

ದಾಖಲಾತಿಗಳ ಪೈಕಿ ನಿ.ಪಿ.1 ದೂರು, ನಿಪಿ–2 ಸ್ಥಳ ಪಂಚನಾಮೆ, ನಿಪಿ–3 ರಿಂದ 8 ಫೋಟೋಗಳು, ನಿಪಿ–9 ಪ್ರ.ವ.ವರದಿ, ನಿಪಿ– 10 ಕಚ್ಚಾ ನಕಾಶೆ, ನಿಪಿ– 11 ಐ.ಎಂ.ವರದಿ, ನಿಪಿ– 12 ಶವಪಂಚನಾಮೆ, ನಿಪಿ– 13 ಪಿ.ಎಂ. ವರದಿ ಆಗಿರುತ್ತವೆ.

**11.** ಅ.ಸಾ.1/ಚಾಸಾ–1 ಪವಿತ್ರ ರವರು ಪಿರ್ಯಾದುದಾರರಾಗಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ 02.11.2023 ರಂದು ಹೊಲದ ಬಳಿ ಮೃತ ವೆಂಕಟೇಶ್ ನನ್ನ ಗಂಡ ಹೋಗುತ್ತಿರುವಾಗ ಆರೋಪಿಯು ಟೆಂಪೋ ವಾಹನದಿಂದ ಅಪಘಾತಪಡಿಸಿರುತ್ತಾರೆ. ಆಗ ನಾನು ಮನೆಯಲ್ಲಿದ್ದೆ, ಸದರಿ ವಿಚಾರ ತಿಳಿದು ನಾನು ಸ್ದಳಕ್ಕೆ ಹೋದಾಗ ಅವರಿಗೆ ತಲೆ , ಕೈ ಕಾಲುಗಳಿಗೆ ಪೆಟ್ಟಾಗಿರುತ್ತದೆ. ಆಂಬುಲೆನ್ಸ್ ನ ಮೂಲಕ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಎರಡು ದಿನಗಳ ನಂತರ ಚಿಕಿತ್ಸೆ ಫಲಕಾರಿಯಾಗದೇ ಮರಣ ಹೊಂದಿರುತ್ತಾರೆ. ನಂತರ ನಾನು ದೂರು ದಾಖಲಿಸಿರುತ್ತೇನೆ. ದೂರು ದಾಖಲಿಸಿದ ದಿನ ಪೊಲೀಸರು ಘಟನಾ ಸ್ಥಳಕ್ಕೆ ಬಂದು ಮಹಜರ್ ಜರುಗಿಸಿ ಅಪಘಾತಕ್ಕೆ ಒಳಗಾದ ವಾಹನವನ್ನು ಅಮಾನತ್ತುಪಡಿಸಿರುತ್ತಾರೆ ಎಂದು ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ. ಮಾನ್ಯ ಸ.ಸ.ಅ. ರವರು ಅ.ಸಾ –1 ರವರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಒಳಪಡಿಸಿ ತಮ್ಮ ಗಂಡ ಹೋಗುತ್ತಿದ್ದ ವಾಹನದ ಸಂಖ್ಯೆಃ ಕೆಎ 05–ಇಕ್ಯೂ–1955 ಕ್ಕೆ ವಾಹನ ಸಂಖ್ಯೆಃ ಎಪಿ–39–ಯುಕೆ –9697 ವಾಹನವು ಅತೀವೇಗ ಮತ್ತು ಅಜಾಗರೂಕತೆಯಿಂದ ಬಂದು ಡಿಕ್ಕಿ ಹೊಡೆಸಿ ಅಪಘಾಪಡಿಸಿರುತ್ತದೆ, ಮಹಜರ್ ಅನ್ನು ಸಂಜೆ

4.00 ರಿಂದ 5.00 ಗಂಟೆಯವರೆಗೆ ಮಾಡಿರುತ್ತಾರೆ ಎಂದು ಸೂಚಿಸಲಾಗಿ ಸರಿ ಎಂದು ನುಡಿದಿರುತ್ತಾರೆ.

**12.** ಅ.ಸಾ 1 ರವರು ಮಾನ್ಯ ಆರೋಪಿ ಪರ ವಕೀಲರ ಪಾಟೀ ಸವಾಲಿನಲ್ಲಿ ಅಪಘಾತ ಯಾವ ರೀತಿ ಆಯಿತು ಎಂದು ನನಗೆ ಗೊತ್ತಿಲ್ಲ, ಅಲ್ಲಿ ಇರುವವರು ಹೇಳಿದ ಕಾರಣ ಗೊತ್ತಾಗಿರುತ್ತದೆ. ವಾಹನಗಳ ನಂಬರ್ ನನಗೆ ಗೊತ್ತಿಲ್ಲ, ಅಪಘಾತಪಡಿಸಿದ ವಾಹನ ಟೆಂಪೋ ಆಗಿರುತ್ತದೆ, ಅಪಘಾತ ಆದ ಅರ್ಧ ಗಂಟೆ ಸಮಯಕ್ಕೆ ನಾನು ಸ್ಥಳಕ್ಕೆ ಹೋಗಿರುತ್ತೇನೆ. ನಿಪಿ 1 ರ ದೂರನ್ನು ನಾನೇ ಬರೆದಿರುತ್ತೇನೆ. ಮಹಜರ್ ಗೆ ಅಪಘಾತದ ದಿನವೇ ಅಪಘಾತ ಸ್ಥಳದಲ್ಲಿ ಸಹಿ ಮಾಡಿರುತ್ತೇನೆ. ಘಟನೆಯ ದಿನವೇ ಕೋಲಾರದ ಆಸ್ಪತ್ರೆಗೆ ಸೇರಿಸಿ ಮಧ್ಯಾಹ್ನ ನಂಗಲಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿರುತ್ತೇನೆ. ದೂರು ಕೊಟ್ಟ ನಂತರ ಪೊಲೀಸ್ ಠಾಣೆಯಿಂದ ನೇರವಾಗಿ ಮತ್ತೆ ಆಸ್ಪತ್ರೆಗೆ ಹೋಗಿರುತ್ತೇನೆ. ಆಸ್ಪತ್ರೆಯಲ್ಲಿ ಒಂದೂವರೆ ಎರಡು ತಿಂಗಳು ಇದ್ದೆವು. ಆಸ್ಪತ್ರೆಯಿಂದ ಬಿಡುಗಡೆಯಾಗುವವರೆಗೂ ಊರಿಗೆ ಬಂದಿರುವುದಿಲ್ಲ ಎಂದು ನುಡಿದಿರುತ್ತಾರೆ.

**13.** ಅ.ಸಾ.2/ಚಾಸಾ-2 ವೆಂಕಟರಾಮಪ್ಪ ರವರು ಪ್ರತ್ಯೆಕ್ಷ ಸಾಕ್ಷಿದಾರರಾಗಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ 02.11.2023 ರಂದು ಬೆಳಿಗ್ಗೆ 6.00 ಗಂಟೆ ಸಮಯದಲ್ಲಿ ಮೃತ ವೆಂಕಟೇಶ್ ರವರು ದ್ವಿಚಕ್ರ ವಾಹನದಲ್ಲಿ ಬರುತ್ತಿದ್ದರು. ಅವರ ವಾಹನಕ್ಕೆ ಟೆಂಪೋ ಬಂದು ಡಿಕ್ಕಿಪಡಿಸಿ ಅಪಘಾತಪಡಿಸಿರುತ್ತದೆ. ನಾನು ಚಾಸಾ -1 ರವರಿಗೆ ಕರೆ ಮಾಡಿ ತಿಳಿಸಿರುತ್ತೇನೆ. ನಂತರ ಆಂಬುಲೆನ್ಸ್ ನ ಮೂಲಕ ವೆಂಕಟೇಶ್ ರವರನ್ನು ಆಸ್ಪತ್ರೆಗೆ

ಕಳುಹಿಸಿರುತ್ತೇನೆ, ಚಿಕಿತ್ಸೆ ಪಲಕಾರಿಯಾಗದೇ ಮರಣ ಹೊಂದಿರುತ್ತಾರೆ. ಪೊಲೀಸರಿಗೆ ಹೇಳಿಕೆ ನೀಡಿರುವುದಿಲ್ಲ ಎಂದು ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ. ಮಾನ್ಯ ಸ.ಸ.ಅ. ರವರು ಅ.ಸಾ -2 ರವರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಒಳಪಡಿಸಿ ದಿನಾಂಕಃ 02.11.2023 ರಂದು ಪೊಲೀಸರು ಹೇಳಿಕೆ ಪಡೆದಿರುತ್ತಾರೆ ಎಂದು ಸೂಚಿಸಲಾಗಿ ಅಲ್ಲಗಳೆದಿರುತ್ತಾರೆ. ಅದೇ ರೀತಿ ಮೃತ ವೆಂಕಟೇಶ್ ರವರು ಹೋಗುತ್ತಿದ್ದ ವಾಹನದ ಸಂಖ್ಯೆಃ ಕೆಎ 05-ಇಕ್ಯೂ-1955 ಎಂದರೆ ಗೊತ್ತಿರುವುದಿಲ್ಲ ಎಂದು ನುಡಿದಿರುತ್ತಾರೆ. ಎಪಿ-39-ಯುಕೆ-9697 ವಾಹನವು ಅತೀವೇಗ ಮತ್ತು ಅಜಾಗರೂಕತೆಯಿಂದ ಬಂದು ಮೃತ ವೆಂಕಟೇಶ್ ರವರ ವಾಹನಕ್ಕೆ ಡಿಕ್ಕಿ ಹೊಡೆಸಿ ಅಪಘಾಪಡಿಸಿರುತ್ತದೆ ಎಂದು ಸೂಚಿಸಲಾಗಿ ಸರಿ ಎಂದು ನುಡಿದಿರುತ್ತಾರೆ. ಅ.ಸಾ 2 ರವರು ಆರೋಪಿ ಪರ ವಕೀಲರ ಪಾಟೀ ಸವಾಲಿನಲ್ಲಿ ಅಪಘಾತವನ್ನು ನೋಡಿರುತ್ತೇನೆ, ಆರೋಪಿಯನ್ನು ಅಪಘಾತ ನಡೆದಾಗ ನೋಡಿರುತ್ತೇನೆ. ಅಪಘಾತದ ಶಬ್ದ ಕೇಳಿ ನೋಡಿರುತ್ತೇನೆ ಎಂದು ನುಡಿದಿರುತ್ತಾರೆ.

**14.** ಅ.ಸಾ.3/ಚಾಸಾ-3 ಪದ್ಮಮ್ಮ ರವರು ಪ್ರತ್ಯೆಕ್ಷ ಸಾಕ್ಷಿದಾರರಾಗಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ 02.11.2023 ರಂದು ಬೆಳಿಗ್ಗೆ 6.00 ಗಂಟೆ ಸಮಯದಲ್ಲಿ ಮೃತ ವೆಂಕಟೇಶ್ ರವರು ದ್ವಿಚಕ್ರ ವಾಹನದಲ್ಲಿ ಬರುತ್ತಿದ್ದರು. ಅವರ ವಾಹನಕ್ಕೆ ಟೆಂಪೋ ಅತೀವೇಗ ಮತ್ತು ಅಜಾಗರೂಕತೆಯಿಂದ ಬಂದು ಡಿಕ್ಕಿಪಡಿಸಿ ಅಪಘಾತಪಡಿಸಿರುತ್ತದೆ. ವೆಂಕಟೇಶ್ ರವರಿಗೆ ತಲೆ, ಕೈ ಕಾಲುಗಳಿಗೆ ಪೆಟ್ಟಾಗಿರುತ್ತದೆ. ನಂತರ ಆಂಬುಲೆನ್ಸ್ ನ

ಮೂಲಕ ವೆಂಕಟೇಶ್ ರವರನ್ನು ಆಸ್ಪತ್ರೆಗೆ ಕಳುಹಿಸಿರುತ್ತೇನೆ, ಚಿಕಿತ್ಸೆ ಫಲಕಾರಿಯಾಗದೇ ಮರಣ ಹೊಂದಿರುತ್ತಾರೆ. ಪೊಲೀಸರಿಗೆ ಹೇಳಿಕೆ ನೀಡಿರುವುದಿಲ್ಲ ಎಂದು ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ. ಮಾನ್ಯ ಸ.ಸ.ಅ. ರವರು ಅ.ಸಾ -3 ರವರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಒಳಪಡಿಸಿ ದಿನಾಂಕಃ 02.11.2023 ರಂದು ಪೊಲೀಸರು ನನ್ನ ಹೇಳಿಕೆ ಪಡೆದಿರುತ್ತಾರೆ ಎಂದು ಸೂಚಿಸಲಾಗಿ ಅಲ್ಲಗಳೆದಿರುತ್ತಾರೆ. ಮೃತ ವೆಂಕಟೇಶ್ ರವರು ಹೋಗುತ್ತಿದ್ದ ವಾಹನದ ಸಂಖ್ಯೆ ಕೆಎ 05- ಇಕ್ಯೂ -1955 ಎಂದರೆ ಗೊತ್ತಿರುವುದಿಲ್ಲ ಎಂದು ನುಡಿದಿರುತ್ತಾರೆ. ಎಪಿ-39- ಯುಕೆ -9697 ವಾಹನವು ಅತೀ ವೇಗ ಮತ್ತು ಅಜಾಗರೂಕತೆಯಿಂದ ಬಂದು ಮೃತ ವೆಂಕಟೇಶ್ ರವರ ವಾಹನಕ್ಕೆ ಡಿಕ್ಕಿ ಹೊಡೆಸಿ ಅಪಘಾಪಡಿಸಿರುತ್ತದೆ ಎಂದು ಸೂಚಿಸಲಾಗಿ ಸರಿ ಎಂದು ನುಡಿದಿರುತ್ತಾರೆ. ಅ.ಸಾ 3 ರವರು ಆರೋಪಿತರ ಪರ ವಕೀಲರ ಪಾಟೀ ಸವಾಲಿನಲ್ಲಿ ಅಪಘಾತವಾದಾಗ ನಾನು ಮತ್ತು ಚಾಸಾ -2 ರವರು ಮಾತ್ರ ಇದ್ದೆವು, ಅಪಘಾತದ ಶಬ್ದ ಕೇಳಿ ನೋಡಿರುತ್ತೇನೆ ಎಂದು ನುಡಿದಿರುತ್ತಾರೆ.

**15.** ಅ.ಸಾ.4/ಚಾಸಾ-4 ಸೌಜನ್ಯ ರವರು ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ 02.11.2023 ರಂದು ಬೆಳಿಗ್ಗೆ 6.00 ಗಂಟೆ ಸಮಯದಲ್ಲಿ ಮೃತ ವೆಂಕಟೇಶ್ ರವರು ದ್ವಿಚಕ್ರ ವಾಹನದಲ್ಲಿ ಬರುತ್ತಿದ್ದರು. ಅವರ ವಾಹನಕ್ಕೆ ಟೆಂಪೋ ಬಂದು ಡಿಕ್ಕಿಪಡಿಸಿ ಅಪಘಾತಪಡಿಸಿರುತ್ತದೆ. ನಾನು ಚಾಸಾ 1 ರವರಿಗೆ ಕರೆ ಮಾಡಿ ತಿಳಿಸಿರುತ್ತೇನೆ. ನಂತರ ಆಂಬುಲೆನ್ಸ್ ನ ಮೂಲಕ ವೆಂಕಟೇಶ್ ರವರನ್ನು ಆಸ್ಪತ್ರೆಗೆ ಕಳುಹಿಸಿರುತ್ತೇನೆ, ಚಿಕಿತ್ಸೆ ಪಲಕಾರಿಯಾಗದೇ ಮರಣ ಹೊಂದಿರುತ್ತಾರೆ. ಪೊಲೀಸರಿಗೆ

ಹೇಳಿಕೆ ನೀಡಿರುವುದಿಲ್ಲ ಎಂದು ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ. ಮಾನ್ಯ ಸ.ಸ.ಅ. ರವರು ಅ.ಸಾ –4 ರವರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಒಳಪಡಿಸಿ ದಿನಾಂಕಃ02.11.2023 ರಂದು ಪೊಲೀಸರು ಹೇಳಿಕೆ ಪಡೆದಿರುತ್ತಾರೆ ಎಂದು ಸೂಚಿಸಲಾಗಿ ಅಲ್ಲಗಳೆದಿರುತ್ತಾರೆ. ಮೃತ ವೆಂಕಟೇಶ್ ರವರು ಹೋಗುತ್ತಿದ್ದ ವಾಹನದ ಸಂಖ್ಯೆಃ ಕೆಎ 05–ಇಕ್ಯೂ–1955 ಎಂದರೆ ಗೊತ್ತಿರುವುದಿಲ್ಲ ಎಂದು ನುಡಿದಿರುತ್ತಾರೆ. ಎಪಿ–39–ಯುಕೆ–9697 ವಾಹನವು ಅತೀವೇಗ ಮತ್ತು ಅಜಾಗರೂಕತೆಯಿಂದ ಬಂದು ಮೃತ ವೆಂಕಟೇಶ್ ರವರ ವಾಹನಕ್ಕೆ ಡಿಕ್ಕಿ ಹೊಡೆಸಿ ಅಪಘಾಪಡಿಸಿರುತ್ತದೆ ಎಂದರೆ ಸರಿ ಎಂದು ನುಡಿದಿರುತ್ತಾರೆ.

**16.** ಅ.ಸಾ.5/ಚಾಸಾ–5 ರಮೇಶ್ ರವರು ಸ್ಥಳ ಪಂಚನಾಮೆ ಸಾಕ್ಷಿದಾರರಾಗಿದ್ದು, ನಿಪಿ–2 ಮಹಜರ್ ನಲ್ಲಿನ ತಮ್ಮ ಸಹಿಯನ್ನು ನಿಪಿ–2(ಬಿ) ಎಂದು ಗುರುತಿಸಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ನಿಪಿ–2 ಕ್ಕೆ ದಿನಾಂಕಃ 02.11.2023 ರಂದು ಕಿರುಮಣಿ ಗೇಟ್ ಬಳಿ ವರ್ಷ ಡಾಬಾದ ಮುಂದೆ ಅಪಘಾತವಾದ ಸ್ಥಳದಲ್ಲಿ ಪೊಲೀಸರು ಮಹಜರ್ ಮಾಡಿದಾಗ ಸಹಿ ಮಾಡಿರುತ್ತೇನೆ. ಮಹಜರ್ ಅನ್ನು ಸಂಜೆ 4.00 ರಿಂದ 5.00 ಗಂಟೆಯವರೆಗೆ ಮಾಡಿರುತ್ತಾರೆ. ಒಂದು ದ್ವಿ ಚಕ್ರ ವಾಹನ ಮತ್ತು ಅಶೋಕ್ ಲೈಲ್ಯಾಂಡ್ ವಾಹನವನ್ನು ಅಮಾನತ್ತುಪಡಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ.

**17.** ಅ.ಸಾ 5 ರವರು ಆರೋಪಿತರ ಪರ ವಕೀಲರ ಪಾಟೀ ಸವಾಲಿನಲ್ಲಿ ನಿಪಿ–2 ರಲ್ಲಿ ಏನು ಬರೆಯಲಾಗಿದೆ ಎಂದರೆ ಗೊತ್ತಿಲ್ಲ, ಮಹಜರ್ ಮಾಡಲು ಎಷ್ಟು ಜನ ಪೊಲೀಸರು

ಬಂದಿರುತ್ತಾರೆ ಎಂದರೆ ಗೊತ್ತಿಲ್ಲ, ಮಹಜರ್ ಗೆ ಎಷ್ಟು ಜನ ಸಹಿ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ, ನಿಪಿ-2 ಅನ್ನು ಯಾರು ಹೇಳಿ ಬರೆಸಿರುತ್ತಾರೆ ಎಂದರೆ ಗೊತ್ತಿಲ್ಲ, ನಿಪಿ-2 ಅನ್ನು ಬರೆದಿರುವ ಚೆಕ್ಕುಬಂದಿ ಏನು ಎಂದರೆ ಗೊತ್ತಿಲ್ಲ, ನಿಪಿ-2 ಜರುಗಿಸಿದ ಸಮಯದಲ್ಲಿ ವಾಹನಗಳು ಎಲ್ಲಿತ್ತು ಎಂದರೆ ಗೊತ್ತಿಲ್ಲ , ವಾಹನಗಳಿಗೆ ಎಲೆಲ್ಲಿ ಜಖಂ ಆಗಿತ್ತು ಎಂದರೆ ಗೊತ್ತಿಲ್ಲ , ಅಪಘಾತದ ವಿಚಾರ ತಿಳಿದುಕೊಂಡು ನಾನೇ ಸ್ಥಳಕ್ಕೆ ಹೋಗಿರುತ್ತೇನೆ. ನಾನು ಸ್ಥಳಕ್ಕೆ ಹೋದಾಗ ಪೊಲೀಸರು ಬಂದಿರಲಿಲ್ಲ, ನಂತರ ಬಂದಿರುತ್ತಾರೆ. ನಿಪಿ-2 ಅನ್ನು ಪೊಲೀಸರು ಬರೆದಿರುತ್ತಾರೆ ಎಂದು ನುಡಿದಿರುತ್ತಾರೆ.

**18.** ಅ.ಸಾ.6/ಚಾಸಾ-6 ಶ್ರೀರಾಮಪ್ಪ ರವರು ಸ್ಥಳ ಪಂಚನಾಮೆ ಸಾಕ್ಷಿದಾರರಾಗಿದ್ದು, ನಿಪಿ-2 ಮಹಜರ್ ನಲ್ಲಿನ ತಮ್ಮ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ನಿಪಿ -2 ಕ್ಕೆ ದಿನಾಂಕಃ 02.11.2023 ರಂದು ಕಿರುಮಣಿ ಗೇಟ್ ಬಳಿ ವರ್ಷ ಡಾಬಾದ ಮುಂದೆ ಅಪಘಾತವಾದ ಸ್ಥಳದಲ್ಲಿ ಪೊಲೀಸರು ಮಹಜರ್ ಮಾಡಿದಾಗ ಸಹಿ ಮಾಡಿರುತ್ತೇನೆ. ಮಹಜರ್ ಅನ್ನು ಸಂಜೆ 4.00 ರಿಂದ 5.00 ಗಂಟೆಯವರೆಗೆ ಮಾಡಿರುತ್ತಾರೆ. ಒಂದು ದ್ವಿ ಚಕ್ರ ವಾಹನ ಮತ್ತು ಅಶೋಕ್ ಲೈಲ್ಯಾಂಡ್ ವಾಹನವನ್ನು ಅಮಾನತ್ತುಪಡಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ.

**19.** ಅ.ಸಾ.6 ರವರು ಆರೋಪಿತರ ಪರ ವಕೀಲರ ಪಾಟೀ ಸವಾಲಿನಲ್ಲಿ ಮೃತರ ಕುಟುಂಬದವರು ನನಗೆ ಕರೆ ಮಾಡಿ ಕರೆಸಿಕೊಂಡಿರುತ್ತಾರೆ. ನಾನು ಸ್ಥಳಕ್ಕೆ ಹೋದಾಗ ಪೊಲೀಸರು ಇರುವುದಿಲ್ಲ, ನಂತರ ಬಂದಿರುತ್ತಾರೆ. ಸ್ಥಳದಲ್ಲಿ 20-30 ಜನ ಇದ್ದರು, ನಿಪಿ-

2 ರಲ್ಲಿ ಏನು ಬರೆಯಲಾಗಿದೆ ಎಂದರೆ ಗೊತ್ತಿಲ್ಲ, ನಿಪಿ–2 ಅನ್ನು ಯಾರು ಹೇಳಿ ಬರೆಸಿರುತ್ತಾರ ಎಂದರೆ ಗೊತ್ತಿಲ್ಲ, ನಿಪಿ–1 ಅನ್ನು ಓದಿ ಹೇಳಿರುತ್ತಾರೆ ಎಂದರೆ ಇಲ್ಲ, ವಾಹನಗಳು ಎಲ್ಲಿದ್ದವು ಎಂದರೆ ಗೊತ್ತಿಲ್ಲ, ವಾಹನಗಳಿಗೆ ಎಲ್ಲಿ ಜಖಂ ಆಗಿರುತ್ತದೆ ಎಂದರೆ ಗೊತ್ತಿಲ್ಲ, ಅದರ ಸಂಖ್ಯೆ ಗೊತ್ತಿರುವುದಿಲ್ಲ ಪೊಲೀಸರು ನಿಪಿ–2 ಅನ್ನು ಪೆನ್ನಿನಲ್ಲಿ ಬೆರದಿರುತ್ತಾರಾ ಎಂದು ಹೌದು ಎಂದು ನುಡಿದಿರುತ್ತಾರೆ.

**20.** ಅ.ಸಾ.7/ಚಾಸಾ–7 ಎಂ. ಅಮರನಾರಾಯಣ ರವರು ಭಾಗಶಃ ತನಿಖಾಧಿಕಾರಿಯಾಗಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ 02.11.2023 ರಂದು ಮದ್ಯಾಹ್ನ 3.00 ಗಂಟೆಗೆ ಚಾಸಾ 1 ರವರು ಹಾಜರಾಗಿ ನೀಡಿದ ದೂರನ್ನು ಸ್ವೀಕರಿಸಿ ಠಾಣಾ ಮೊ. ಸಂಖ್ಯೆ 218/2023 ರಲ್ಲಿ ಪ್ರಕರಣ ದಾಖಲಿಸಿ ಪ್ರ..ವ.ವರದಿಯನ್ನು ದಾಖಲಿಸಿರುತ್ತೇನೆ . ಅದೇ ದಿನ ಕೃತ್ಯ ಸ್ಥಳಕ್ಕೆ ಬೇಟಿ ನೀಡಿ ಚಾಸಾ–5 ವತ್ತು 6 ರವರ ಸಮಕ್ಷಮ ಚಾಸಾ–1 ರವರು ತೋರಿಸಿದ ಸ್ಥಳದಲ್ಲಿ ಸ್ಥಳ ಪಂಚನಾಮೆ ಜರುಗಿಸಿ ಅಪಘಾತಕ್ಕೆ ಒಳಗಾದ ಎಪಿ–39–ಯುಕೆ 9679 ಅಶೋಕ್ ಲೇಲ್ಯಾಂಡ್ ಕಂಪನಿಯ ಗೂಡ್ಸ್ ವಾಹನ ಮತ್ತು ದ್ವಿ ಚಕ್ರ ವಾಹನದ ಸಂಖ್ಯೆ ಕೆಎ 05 ಇಕ್ಯೂ–1955 ವಾಹನವನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ. ಸ್ಥಳ ದಲ್ಲಿ ಕಚ್ಚಾ ನಕಾಶೆಯನ್ನು ತಯಾರಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಅ.ಸಾ.7 ರವರು ಆರೋಪಿತರ ಪರ ವಕೀಲರ ಪಾಟೀ ಸವಾಲಿನಲ್ಲಿ ಘಟನಾ ಸ್ಥಳಕ್ಕೆ ಹೋದಾಗ ಚಾಸಾ –1, 5 ಮತ್ತು 6 ರವರು ಇದ್ದರು, ಘಟನಾ ಸ್ಥಳ ಜನ ನಿಬಿಡ ಸ್ಥಳ ಎಂದರೆ ನಾವು ಸ್ಥಳದಲ್ಲಿದಾಗ ಯಾರು ಇರಲಿಲ್ಲ ಎಂದು ನುಡಿದಿರುತ್ತಾರೆ.

**21.** ಅ.ಸಾ.8/ಚಾಸಾ-8 ಕೆ.ಜಿ. ಸತೀಶ್ ರವರು ತನಿಖಾಧಿಕಾರಿಯಾಗಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ 20.12.2023 ರಂದು ಚಾಸಾ -2 ರಿಂದ 4 ರವರ ಹೇಳಿಕೆಗಳನ್ನು ದಾಖಲಿಸಿರುತ್ತೇನೆ . ತನಿಖೆ ಪೂರ್ಣಗೊಳಿಸಿ ಆರೋಪಿತರ ವಿರುದ್ದ ಸಾಕಷ್ಟು ಸಾಕ್ಷ್ಯಾದಾರಗಳು ದೊರಕಿದ್ದರಿಂದ ನ್ಯಾಯಾಲಯಕ್ಕೆ ದಿನಾಂಕಃ27.12.2023 ರಂದು ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಅ.ಸಾ.8 ರವರು ಆರೋಪಿತರ ಪರ ವಕೀಲರ ಪಾಟೀ ಸವಾಲಿನಲ್ಲಿ ಚಾಸಾ-2 ರಿಂದ 4 ರವರನ್ನು ಒಂದೇ ದಿನ ಕರೆಸಿ, ಬೇರೆ ಬೇರೆಯಾಗಿ ಹೇಳಿಕೆಗಳನ್ನು ದಾಖಲಿಸಿರುತ್ತೇನೆ. ಹೇಳಿಕೆ ದಾಖಲಿಸುವ ಹಿಂದಿನ ದಿನ ನಮ್ಮ ಸಿಬ್ಬಂದಿ ಸುರೇಶ್ ರವರ ಮೂಲಕ ಪೋನ್ ಮಾಡಿ ಕರೆಸಿರುತ್ತೇವೆ. ಸ್ಥಳಕ್ಕೆ ಹೋಗಿ ವಿಚಾರಣೆ ಮಾಡಿದಾಗ ಸಾಕ್ಷಿದಾರರ ಹೆಸರು, ವಿಳಾಸ, ಪೋನ್ ನಂಬರ್ ಪಡೆದಿರುತ್ತೇವೆ. ಹೋಟೆಲ್ ರವರನ್ನು ವಿಚಾರಿಸಲಾಗಿ ಸಾಕ್ಷಿದಾರರ ಮಾಹಿತಿ ತಿಳಿದುಬಂದಿರುತ್ತದೆ ಎಂದು ನುಡಿದಿರುತ್ತಾರೆ.

**22.** ಅ.ಸಾ.9/ಚಾಸಾ-16 ರಘು ಎಂ.ಹೆಚ್ ರವರು ವಾಹನ ತಪಾಸಣಾ ಅಧಿಕಾರಿಯಾಗಿದ್ದು , ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ 08.11.2023 ರಂದು ಪೊಲೀಸ್ ಠಾಣೆಗೆ ಬೇಟಿ ನೀಡಿ ಎರಡು ವಾಹನಗಳನ್ನು ತಪಾಸಣೆ ಪರಿಶೀಲಿಸಿದಾಗ ಎಪಿ 39-ಯುಕೆ-9679 ಎಲ್ ಜಿವಿ ಸದರಿ ವಾಹನಕ್ಕೆ ವಾಹನದ ಮುಂಭಾಗದ ಎಡಬದಿಯ ಬಂಪರ್ ಜಖಂ, ಎಡಭಾಗದ ಎಡ್ ಲೈಟ್ ನ ಇಂಡಿಕೇಟರ್ ಜಖಂ, ವಾಹನದ ಎಡಭಾಗದ ಬಾಡಿ ಡೆಂಟ್ ಆಗಿ ಜಖಂ ಆಗಿರುತ್ತದೆ. 2 ನೇ ವಾಹನ ಕೆಎ 05 ಇಕ್ಯೂ-1955

ಮೋಟಾರು ಸೈಕಲ್ ವಾಹನಕ್ಕೆ ಮುಂಭಾಗದ ಬಲಭಾಗದ ಇಂಡಿಕೇಟರ್ ಜಖಂ , ಹೆಡ್ ಲೈಟ್ ವೈಜರ್ ಜಖಂ, ಬಲಭಾಗದ ಕ್ರಾಶ್ ಗಾರ್ಡ್ ಜಖಂ, ಪೆಟ್ರೋಲ್ ಟ್ಯಾಂಕ್ ನ ಬಲಭಾಗ ಜಖಂ, ಹಿಂಬದಿಯ ಬಲಭಾಗದ ಇಂಡಿಕೇಟರ್ ಜಖಂ, ಎರಡೂ ವಾಹನಗಳ ಬ್ರೇಕ್ ಸುಸ್ಥಿತಿಯಲ್ಲಿರುತ್ತದೆ. ಅಪಘಾತವು ವಾಹನದ ತಾಂತ್ರಿಕ ದೋಷದಿಂದ ಆಗಿರುವುದಿಲ್ಲ. ಈ ಬಗ್ಗೆ ವರದಿಯನ್ನು ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ಅ.ಸಾ.8 ರವರು ಆರೋಪಿತರ ಪರ ವಕೀಲರ ಪಾಟೀ ಸವಾಲಿನಲ್ಲಿ ದ್ವಿ ಚಕ್ರ ವಾಹನದ ಹಿಂಭಾಗದಲ್ಲಿ ಇಂಡಿಕೇಟರ್ ಹೊರತು ಪಡಿಸಿ ಬೇರೆ ಜಖಂ ಆಗಿರುವುದಿಲ್ಲ ಎಂದು ನುಡಿದಿರುತ್ತಾರೆ.

**23.** ಪ್ರಸ್ತುತ ಪ್ರಕರಣದಲ್ಲಿನ ದಾಖಲಾತಿ ಮತ್ತು ನುಡಿ ಸಾಕ್ಷ್ಯವನ್ನು ಕುಲಂಕುಷವಾಗಿ ಪರಿಶೀಲಿಸಲಾಗಿ ಪಿರ್ಯಾದುದಾರರಾದ ಅ.ಸಾ-1 ರವರು ಕೇಳಿಕೆ ಸಾಕ್ಷಿದಾರರಾಗಿದ್ದು, ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿರುವುದಿಲ್ಲ, ಅಪಘಾತದ ವಿಚಾರವು ತಿಳಿದ ಅರ್ಧ ಗಂಟೆಗೆ ಸ್ಥಳಕ್ಕೆ ಬಂದಿರುವುದಾಗಿ ನುಡಿದಿರುತ್ತಾರೆ. ಅ.ಸಾ -2 ರಿಂದ 4 ರವರು ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ದ್ವಿ ಚಕ್ರ ವಾಹನಕ್ಕೆ ಟೆಂಪೋ ಬಂದು ಡಿಕ್ಕಿಪಡಿಸಿರುತ್ತದೆ ಎಂದು ನುಡಿದಿದ್ದು, ಪೊಲೀಸರಿಗೆ ಹೇಳಿಕೆ ನೀಡಿರುವುದಿಲ್ಲ ಎಂದು ನುಡಿದಿರುತ್ತಾರೆ ಮಾನ್ಯ ಸ.ಸ.ಅ ರವರು ಪಾಟೀ ಸವಾಲಿನಲ್ಲಿ ಪೊಲೀಸರಿಗೆ ಹೇಳಿಕೆ ನೀಡಿರುತ್ತೇವೆ ಎಂದು ಸೂಚಿಸಲಾಗಿ ಅಲ್ಲಗಳೆದಿರುತ್ತಾರೆ. ಆರೋಪಿತರ ವಕೀಲರ ಪಾಟೀ ಸವಾಲಿನಲ್ಲಿ ಅಪಘಾತದ ಸಮಯದಲ್ಲಿ ತಮ್ಮನ್ನು ಹೊರತುಪಡಿಸಿ ಬೇರೆ ಯಾರು ಇರಲಿಲ್ಲ, ಶಬ್ಧ ಕೇಳಿ ನೋಡಿರುತ್ತೇವೆ ಎಂದು ನುಡಿದಿರುತ್ತಾರೆ.

**24.** ಸ್ಥಳ ಪಂಚನಾಮೆ ಸಾಕ್ಷಿದಾರರಾದ ಅ.ಸಾ 5 ಮತ್ತು 6 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಅಭಿಯೋಜನೆಗೆ ಪೂರಕವಾಗಿ ನುಡಿದಿರುತ್ತಾರೆ. ಆದರೆ ಆರೋಪಿ ಪರ ವಕೀಲರ ಪಾಟೀ ಸವಾಲಿನಲ್ಲಿ ಮಹಜರ್ ನಲ್ಲಿ ಏನು ಬರೆದಿದ್ದಾರೆಂದು ಗೊತ್ತಿಲ್ಲ, ವಾಹನಗಳು ಎಲ್ಲಿ ಇದ್ದವು, ವಾಹನಗಳಿಗೆ ಎಲ್ಲೆಲ್ಲಿ ಜಖಂ ಆಗಿತ್ತು ಎಂದು ಗೊತ್ತಿಲ್ಲ , ಮಹಜರ್ ಗೆ ಯಾರಾರೂ ಸಹಿ ಮಾಡಿರುತ್ತಾರೆ ಎಂದು ಗೊತ್ತಿಲ್ಲ ಎಂದು ಅಭಿಯೋಜನೆಗೆ ಸಂಪೂರ್ಣವಾಗಿ ವ್ಯತಿರಿಕ್ತವಾಗಿ ಸಾಕ್ಷಿ ನುಡಿದಿರುತ್ತಾರೆ. ಅದೇ ರೀತಿ ಮಹಜರ್ ಸಮಯದಲ್ಲಿ 20-30 ಜನ ಸೇರಿದ್ದರು ಎಂದು ನುಡಿದಿರುತ್ತಾರೆ. ಆದರೆ ತನಿಖಾಧಿಕಾರಿಯಾದ ಅ.ಸಾ-7 ರವರು ಚಾಸಾ-1, 5 ಮತ್ತು 6 ರವರು ಮಾತ್ರ ಇದ್ದರು ಎಂದು ನುಡಿದಿರುತ್ತಾರೆ. ಅ.ಸಾ -1 ರವರು ಘಟನಾ ದಿನ ಗಾಯಾಳುವನ್ನು ಕೋಲಾರದ ಆಸ್ಪತ್ರೆಗೆ ಸೇರಿಸಿ ಮಧ್ಯಾಹ್ನ ನಂಗಲಿ ಪೊಲೀಸ್ ಠಾಣೆಯಲ್ಲಿ ದೂರು ಕೊಟ್ಟ ನಂತರ ನೇರವಾಗಿ ಆಸ್ಪತ್ರೆಗೆ ಹೋಗಿದ್ದು, ಆಸ್ಪತ್ರೆಯಿಂದ ಬಿಡುಗಡೆಯಾಗುವರೆಗೂ ವಾಪಸ್ಸು ಬಂದಿಲ್ಲ ಎಂದು ನುಡಿದಿರುವುದರಿಂದ ಮಹಜರ್ ಸಮಯದಲ್ಲಿ ಅ.ಸಾ-1 ರವರು ಹಾಜರಿದ್ದರು ಎಂಬುದು ಸಂಶಯಾಸ್ಪದವಾಗಿರುತ್ತದೆ. ಅ.ಸಾ -1, 5 ಮತ್ತು 6 ರವರ ಸಮಕ್ಷಮ ಘಟನಾ ಸ್ಥಳದಲ್ಲೆ ನಿಪಿ-2 ರ ಮಹಜರ್ ಅನ್ನು ಜರುಗಿಸಿ ಅಪಘಾತಕ್ಕೆಗೊಳಗಾದ ಎರಡು ವಾಹನಗಳನ್ನು ಅಮಾನತ್ತುಪಡಿಸಿಕೊಂಡಿರುವುದಾಗಿ ಸಾಭೀತುಪಡಿಸಲು ಅಭಿಯೋಜನೆಯು ವಿಫಲವಾಗಿರುತ್ತದೆ.

**25.** ಅಪಘಾತದ ಸಮಯದಲ್ಲಿ ಎರಡು ವಾಹನಗಳ ಬ್ರೇಕ್ ಸುಸ್ಥಿತಿಯಲ್ಲಿದ್ದು, ಯಾವುದೇ ತಾಂತ್ರಿಕ ದೋಷದಿಂದ ಅಪಘಾತವಾಗಿಲ್ಲ ಎಂದು ಐ.ಎಂ.ವಿ.ವರದಿಯಿಂದ ಕಂಡುಬಂದಿರುತ್ತದೆ. ಆರೋಪಿ ಪರ ವಕೀಲರು ಆರೋಪಿಯು ವಾಹನವನ್ನು ಚಾಲಾಯಿಸುತ್ತಿರಲಿಲ್ಲ ಎಂದು ಪ್ರತಿವಾದ ತೆಗೆದುಕೊಂಡಿರುತ್ತಾರೆ. ಆರೋಪಿತನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿದ ಪರಿಣಾಮವಾಗಿ ಅಪಘಾತವಾಗಿದ್ದು, ಸದರಿ ಅಪಘಾತದ ಪರಿಣಾಮವಾಗಿ ಗಾಯಾಳು ಮೃತಪಟ್ಟಿರುವುದಾಗಿ ಸಾಭೀತುಪಡಿಸುವ ಹೊಣೆಗಾರಿಕೆ ಅಭಿಯೋಜನೆಯದ್ದಾಗಿರುತ್ತದೆ. ಅ.ಸಾ–1 ಕೇಳಿಕೆ ಸಾಕ್ಷಿಯಾಗಿರುವುದರಿಂದ ಆರೋಪಿ ಅಪಘಾತಪಡಿಸಿದ್ದಾನೆ ಎಂಬ ಅವರ ಸಾಕ್ಷ್ಯ ಅಭಿಯೋಜನೆಗೆ ಪೂರಕವಾಗಿರುವುದಿಲ್ಲ. ಪ್ರತ್ಯಕ್ಷ ಸಾಕ್ಷಿದಾರರಾದ ಅ.ಸಾ–2 ರಿಂದ 4 ರವರು ಟೆಂಪೋ ಅತೀವೇಗ ಮತ್ತು ಅಜಾಗರೂಕತೆಯಿಂದ ಬಂದು ಡಿಕ್ಕಿ ಪಡಿಸಿರುತ್ತದೆ ಎಂದು ನುಡಿದಿದ್ದು, ಆರೋಪಿಯೇ ಟೆಂಪೋ ಚಲಾಯಿಸುತ್ತಿದ್ದರೆಂಬ ಬಗ್ಗೆ ಯಾವುದೇ ಸಾಕ್ಷ್ಯ ನುಡಿದಿರುವುದಿಲ್ಲ. ಗಾಯಾಳು 40 ದಿನಗಳ ನಂತರ ಮೃತಪಟ್ಟಿರುವುದಾಗಿ ಕಂಡು ಬಂದಿರುತ್ತದೆ. ಆರೋಪಿ ಅತೀವೇಗ ಮತ್ತು ಅಜಾಗರೂಕತೆಯಿಂದ ವಾಹನ ಚಲಾಯಿಸಿದ ಪರಿಣಾಮ ಅಪಘಾತವಾಗಿ ಅದರ ಪರಿಣಾಮ ಗಾಯಾಳು ಮೃತಪಟ್ಟಿರುವುದಾಗಿ ಸಾಬೀತುಪಡಿಸಲು ಪೂರಕ ಸಾಕ್ಷ್ಯಾಧಾರಗಳು ಲಭ್ಯವಿರುವುದಿಲ್ಲ. ಅಭಿಯೋಜನೆಯು ಸೂಕ್ತ ಸಾಕ್ಷ್ಯಾಧಾರಗಳ ಮೂಲಕ ಆರೋಪಿತನ ಮೇಲೆ ಹೊರಿಸಲಾದ ಆರೋಪಗಳನ್ನು ಸಾಭೀತುಪಡಿಸುವಲ್ಲಿ ಸಂಪೂರ್ಣವಾಗಿ ವಿಫಲವಾದ ಕಾರಣ ಆರೋಪಿತರು ಸಂಶಯದ ಹೊಂದಲು

ಅರ್ಹರಿರುತ್ತಾರೆ. ಆದ್ದರಿಂದ ನ್ಯಾಯಾಲಯದ ನಿರ್ಣಯಕ್ಕೆ ಬಂದ ಅಂಶ 1 ಮತ್ತು 2 ನ್ನು **ನಕಾರಾತ್ಮಕವಾಗಿ** ಉತ್ತರಿಸಿದೆ.

26. <u>**ಅಂಶ-3:**</u> ಮೇಲ್ಕಂಡ ಚರ್ಚೆಯಲ್ಲಿ ಅಂಶ 1 ಮತ್ತು 2 ನ್ನು **ನಕಾರಾತ್ಮಕವಾಗಿ** ಉತ್ತರಿಸಿರುವುದರಿಂದ ಆರೋಪಿಯು ಸಂಶಯದ ಲಾಭ ಹೊಂದಿ ಬಿಡುಗಡೆಗೆ ಅರ್ಹರಾಗಿದ್ದು ಈ ಕೆಳಕಂಡ ಆದೇಶ ಹೊರಡಿಸಿದೆ.

## ಆದೇಶ

ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ 255 (1) ರಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಆರೋಪಿತನ ವಿರುದ್ಧ ಹೊರಿಸಲಾದ ಭಾರತೀಯ ದಂಡ ಸಂಹಿತೆ ಕಲಂ 279, 304(ಎ) ರಡಿಯಲ್ಲಿನ ಆರೋಪಗಳಿಂದ ಆರೋಪಿತನನ್ನು ನಿರ್ದೋಷಿ ಎಂದು ತಿರ್ಮಾನಿಸಿ ಬಿಡುಗಡೆಗೆ ಆದೇಶಿಸಲಾಗಿದೆ.

ಆರೋಪಿತನು ಮತ್ತು ಅವರ ಜಾಮೀನುದಾರರು ಬರೆದುಕೊಟ್ಟಿರುವ ಜಾಮೀನು ಮುಚ್ಚಳಿಕೆಯು ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ) ಪ್ರಕಾರ 6 ತಿಂಗಳ ವರೆಗೆ ಜಾರಿಯಲ್ಲಿರತಕ್ಕದೆಂದು ಆದೇಶಿಸಲಾಗಿದೆ.

ವಾಹನದ ಬಿಡುಗಡೆಗೊಳಿಸಿ ಮಾಡಿರುವ ಮಧ್ಯಂತರ ಆದೇಶವನ್ನು ಖಾಯಂಗೊಳಿಸಿಲಾಗಿದೆ.

(ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟಿದ್ದು ಅವರು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿದ ನಂತರ ಓದಿ ತಿದ್ದುಪಡಿ ಮಾಡಿ ಈ ದಿನ ಅಂದರೆ ದಿನಾಂಕ 9 ನೇ ಜುಲೈ 2026 ರಂದು ತೆರೆದ ನ್ಯಾಯಾಲಯದಲ್ಲಿ ಉದ್ಘೋಷಿಸಿದ್ದೇನೆ)

DUNDAIAH ROHINI
Digitally signed by DUNDAIAH ROHINI
Date: 2026.07.09 17:36:15 +0530

**(ರೋಹಿಣಿ.ಡಿ)**

**1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಮುಳಬಾಗಿಲು.**

## ಃಅನುಬಂಧಃ

## 1. ಅಭಿಯೋಜನೆಯ ಪರವಾಗಿ ವಿಚಾರಣೆಯಾದ ಸಾಕ್ಷಿಗಳ ಪಟ್ಟಿಃ

| ಅಭಿಯೋಜನೆಯ ಪರ ಸಾಕ್ಷಿದಾರರು ಸಂ. | ಸಾಕ್ಷಿದಾರರು ಹೆಸರು | ವಿವರಣೆ |
|---|---|---|
| ಪ್ರಾಸಾ.1 | ಪವಿತ್ರ | ಪಿರ್ಯಾದುದಾರರು |
| ಪ್ರಾಸಾ.2 | ವೆಂಕಟರಾಮಪ್ಪ | ಪ್ರತ್ಯಕ್ಷ ಸಾಕ್ಷಿದಾರರು |
| ಪ್ರಾಸಾ.3 | ಪದ್ಮಮ್ಮ | ಪ್ರತ್ಯಕ್ಷ ಸಾಕ್ಷಿದಾರರು |
| ಪ್ರಾಸಾ.4 | ಸೌಜನ್ಯ | ಪ್ರತ್ಯಕ್ಷ ಸಾಕ್ಷಿದಾರರು |
| ಪ್ರಾಸಾ.5 | ರಮೇಶ್ | ಸ್ಥಳ ಪಂಚನಾಮೆ ಸಾಕ್ಷಿದಾರರು |
| ಪ್ರಾಸಾ.6 | ಶ್ರೀರಾಮಪ್ಪ | ಸ್ಥಳ ಪಂಚನಾಮೆ ಸಾಕ್ಷಿದಾರರು |
| ಪ್ರಾಸಾ.7 | ಎಂ.ಅಮರನಾರಾಯಣ | ಭಾಗಶಃ ತನಿಖಾಧಿಕಾರಿಗಳು |
| ಪ್ರಾಸಾ.8 | ಕೆ.ಜಿ. ಸತೀಶ್ | ತನಿಖಾಧಿಕಾರಿಗಳು |
| ಪ್ರಾಸಾ.9 | ರಘು ಎಂ.ಹೆಚ್ | ವಾಹನ ತಪಾಸಣಾಧಿಕಾರಿ |

## 2. ಅಭಿಯೋಜನೆಯ ಪರ ಗುರ್ತಿಸಲಾದ ದಾಖಲೆಗಳ ಪಟ್ಟಿಃ

| ನಿಶಾನೆಗಳ ಸಂ. | ನಿಶಾನೆಗಳ ವಿವರಣೆ | ಸಾಬೀತುಪಡಿಸಿದ್ದು /ಗುರುತಿಸಿದ್ದು |
|---|---|---|
| ನಿಪಿ.1 | ದೂರು | ಅ.ಸಾ -1 |
| ನಿಪಿ.2 | ಸ್ಥಳ ಪಂಚನಾಮೆ | ಅ.ಸಾ –5 ಮತ್ತು 6 |
| ನಿಪಿ.3 ರಿಂದ 8 | ಫೋಟೋಗಳು | ಅ.ಸಾ –2 ರಿಂದ 4 |
| ನಿಪಿ.9 | ಪ್ರ.ವ.ವರದಿ | ಅ.ಸಾ – 7 |
| ನಿಪಿ.10 | ಕಚ್ಚಾ ನಕಾಶೆ | ಅ.ಸಾ – 7 |

| | | |
|---|---|---|
| ನಿಪಿ.11 | ಐ.ಎಂ.ವಿ ವರದಿ | ಅ.ಸಾ – 9 |
| ನಿಪಿ.12 | ಶವ ಪಂಚನಾಮೆ | ಅ.ಸಾ – 6 |
| ನಿಪಿ.13 | ಪಿ.ಎಂ. ವರದಿ | ಅ.ಸಾ - 8 |

### 3. ಅಭಿಯೋಜನೆಯ ಪರ ಗುರ್ತಿಸಲಾದ ಮುದ್ದೆ ಮಾಲುಗಳ ಪಟ್ಟಿ:

| ಗುರುತಿಸಲಾದ ಮುದ್ದು ಮಾಲುಗಳ ಸಂ. | ಮುದ್ದೆ ಮಾಲುಗಳ ವಿವರಣೆ | ಸಾಬೀತುಪಡಿಸಿದ್ದು / ಗುರುತಿಸಿದ್ದು |
|---|---|---|
| –ಇಲ್ಲಾ – | –ಇಲ್ಲಾ – | –ಇಲ್ಲಾ – |

### 4. ಆರೋಪಿಗಳ ಪರ ವಿಚಾರಣೆಯಾದ ಸಾಕ್ಷಿಗಳ ಪಟ್ಟಿ:

| ಆರೋಪಿ ಪರ ಸಾಕ್ಷಿದಾರರು ಸಂ. | ಸಾಕ್ಷಿದಾರರು ಹೆಸರು | ವಿವರಣೆ |
|---|---|---|
| –ಯಾರು ಇಲ್ಲ– | | |

### 5. ಆರೋಪಿಗಳ ಪರ ಗುರ್ತಿಸಲಾದ ದಾಖಲೆಗಳ ಪಟ್ಟಿ:

| ನಿಶಾನೆಗಳ ಸಂ. | ನಿಶಾನೆಗಳ ವಿವರಣೆ | ಸಾಬೀತುಪಡಿಸಿದ್ದು / ಗುರುತಿಸಿದ್ದು |
|---|---|---|
| –ಯಾವುದು ಇಲ್ಲ– | | |

DUNDAIAH ROHINI
Digitally signed by DUNDAIAH ROHINI
Date: 2026.07.09 17:36:27 +0530

**(ರೋಹಿಣಿ.ಡಿ)**

**1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ಮುಳಬಾಗಿಲು.**